ಇದರ ಅಪಶ್ಯಕತೆ ಇಲ್ಲವೆಂದು ಹೇಳುತ್ತೇನೆ.

ಡಾ॥ ವಿ. ಎಸ್. ಆಚಾರ್ಯ.—ಪರಿಸ್ಥಿತಿ ಹಾಗಿಲ್ಲ. ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್ ಎನ್. ಲಕ್ಷ್ಮೀಪತಿ.—ರೈತರಿಂದ ಯಾವ ದೂರು ಬಂದಿಲ್ಲ. ಅಲ್ಲಿ ವೆಂಟೆಂಡ್ ಡ್ಯಾಮ್ ಕಟ್ಟಿದರೂ ಕೂಡ ಪ್ರಾಬ್ಲಮ್ ಉದ್ಭವವಾಗುತ್ತದೆ. ಆದರಿಂದ ಏನು ಪ್ರಯೋಜನವಾಗುವುದಿಲ್ಲ. ೧೭೯ ಎಕರೆಗೆ ಮೇಲೆ ಕಟ್ಟಿರುವುದರಿಂದ ಪ್ರಯೋಜನವಾಗುತ್ತದೆ. ಈಗ ಅದುನೇರಿ ೨೨೦ ಎಕರೆ ಆಗುವುದರಿಂದ ಅದರ ಉಪಯೋಗದ ಬಗ್ಗೆ ತಾವೇ ಯೋಚನೆ ಮಾಡಬೇಕು.

ಡಾ॥ ವಿ. ಎಸ್. ಆಚಾರ್ಯ.—ಈಗ ಹತ್ತು ಪರ್ಸೆಂಟ್‌ನಷ್ಟು ಸೆಲ್ಟೆನೆಟಿ ಬಂದಿದೆ. ೧೦ ಪರ್ಸೆಂಟ್ ಸೆಲ್ಟೆನೆಟಿ ಬಂದಿರುವುದರಿಂದ ಕೃಷಿಗೆ ಯೋಗ್ಯವಾಗಿಲ್ಲ. ಆದರಿಂದ ಇನ್ನೊಂದು ಅಣೆಕಟ್ಟನ್ನು ಕಟ್ಟಿದರೆ ಸ್ವಲ್ಪ ಸೆಲಿನೆಟಿ ಕಡಿಮೆಯಾಗಿ ಬಫರ್ ಕ್ರಾಪ್ ತೆಗೆಯಬಹುದು. ಮತ್ತೆ ಸಿಹಿನೀರು ಸಿಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಎಲ್ಲಿ ಕಟ್ಟಿದರೂ ಹತ್ತು ಪರ್ಸೆಂಟ್ ಬಂದೇಬರುತ್ತದೆ. ಸಮುದ್ರದ ನೀರಿಗೂ ಹೊಳೆನೀರಿಗೂ ಮದ್ಯೆ ಕಟ್ಟೆಯನ್ನು ಕಟ್ಟಿ ಗೇಟ್‌ಗಳನ್ನು ಇಟ್ಟು ಮುಚ್ಚಿರುತ್ತಾರೆ. ಸಮುದ್ರದಲ್ಲಿ ನೀರು ಉಕ್ಕಿ ಸ್ವಲ್ಪ ಭಾಗ ನೀರು ಉಕ್ಕಿದಾಗ ಅಲ್ಲಿ ಇರತಕ್ಕಂಥ ಕ್ರಿಮಿಕೀಡೆಗಳೇ ಬಾಗಿಲನ್ನು ತಿನ್ನುತ್ತಿರುತ್ತವೆ. ಸ್ವಲ್ಪ ಮಟ್ಟಿನ ಉಪ್ಪುನೀರು ಬರುವುದರಿಂದಲೂ ಕೂಡ ಸ್ವಲ್ಪಮಟ್ಟಿಗೆ ಅನುಕೂಲವು ಆಗುತ್ತದೆಂದು ರೈತರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ ಸರ್ಕಾರದವರ ಅಭಿಪ್ರಾಯವೂ ಅದೇ ಆಗಿರುತ್ತದೆ.

ಡಾ॥ ವಿ. ಎಸ್. ಆಚಾರ್ಯ.—ಸ್ಥಳ ಪರಿಶೀಲನೆನಿಮಿತ್ತ ತಿಳಿದುಕೊಂಡು ಒಳ್ಳೆಯದೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಭೇಟಿ ಕೊಡುತ್ತೇನೆ. ತಮ್ಮ ಜೊತೆಯಲ್ಲಿಯೇ ಬರುತ್ತೇನೆ. ಶಾಸಕರ ಜೊತೆಯಲ್ಲಿ ಚರ್ಚೆ ಮಾಡಿರುತ್ತೇನೆ. ಶಾಸಕರೂ ಕೂಡ ಒಪ್ಪಿಕೊಂಡಿರುತ್ತಾರೆ. ಜಾಗ ನೋಡೋಣ.

ದಾವಣಗೆರೆ ವಿಭಾಗದಲ್ಲಿ ಲೋಕೋಪಯೋಗಿ ರಸ್ತೆಗಳ ದುಸ್ಥಿತಿ ಕುರಿತಂ

೪೭೭(೫೫) ಪಂಪಾಪತಿ (ದಾವಣಗೆರೆ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ದಾವಣಗೆರೆಯಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ರಸ್ತೆಗಳು ತೀರಾ ಹಾಳಾಗಿ ವಾಹನ ಸಂಚಾರಕ್ಕೆ ತೊಂದರೆ ಬಂದಿರುವುದು ಮತ್ತು ರಸ್ತೆ ಅಪಘಾತಗಳಿಗೆ ಕಾರಣವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಾದರೆ ಈ ರಸ್ತೆಗಳನ್ನು ರಿಪೇರಿ ಮಾಡಿ ಅಪಘಾತಗಳನ್ನು ತಪ್ಪಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ರಸ್ತೆಗಳು ವಾಹನ ಸಂಚಾರಕ್ಕೆ ತೊಂದರೆಯಾಗುವಷ್ಟು ಮತ್ತು ಅಪಘಾತಗಳಿಗೆ ಕಾರಣವಾಗುವಷ್ಟು ತೀರಾ ಹಾಳಾಗಿಲ್ಲ.

(ಆ) ಈ ನಗರದ ವ್ಯಾಪ್ತಿಯಲ್ಲಿ ಬರುವ ನಾಲ್ಕು ರಸ್ತೆಗಳ ಕೆಟ್ಟುಹೋದ ಭಾಗಗಳನ್ನು ವಿಶೇಷ ದುರಸ್ತಿಗೆ ಕೊಟ್ಟು ಅನುದಾನಕ್ಕೆ ತಕ್ಕಂತೆ ಪ್ರತಿಪರ್ಷವೂ ರಿಪೇರಿ ಮಾಡಲಾಗುತ್ತಿದೆ. ಇದಲ್ಲದೆ ಕೆಟ್ಟುಹೋದ ಭಾಗಗಳ ಸುಧಾರಣೆಯನ್ನು ಮಾಡಲು ೮.೦೦ ಲಕ್ಷ ರೂ. ಗಳ ಅಂದಾಜಿನಲ್ಲಿ ೧೯೮೩–೮೪ರ ಆಯವ್ಯಯ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಕಾಮಗಾರಿಗಳನ್ನು ಸಧ್ಯದಲ್ಲಿ ತೆಗೆದುಕೊಳ್ಳಲಾಗುವುದು ಈ ರಸ್ತೆಗಳ ಇನ್ನುಳಿದ ಕೆಟ್ಟು ಹೋಗಿರುವ ಭಾಗಗಳ ಸುಧಾರಣೆಯನ್ನು ಆರ್ಥಿಕ ಪರಿಸ್ಥಿತಿಗನುಗುಣವಾಗಿ ಹಂಚ ಹಂತದಲ್ಲಿ ತೆಗೆದುಕೊಳ್ಳಲಾಗುವುದು

ಶ್ರೀ ಪಂಪಾಪತಿ.— ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಇಲ್ಲಿ ರಸ್ತೆಗಳು ಹಾಳಾಗಿಲ್ಲ ಎಂದು ಹೇಳಿರುತ್ತಾರೆ, ರಸ್ತೆಗಳು ಬಹಳ ಹಾಳಾಗಿವೆ. ನಮ್ಮ ನಗರದ ರಸ್ತೆಗಳು ಎಷ್ಟರಮಟ್ಟಿಗೆ ಹಾಳಾಗಿವೆ ಎಂದು ಹೇಳಿದರೆ ಆಟೋರಿಕ್ಷಾಗಳು ಕೂಡ ಓಡಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾರಾದರೂ ಗರ್ಭಿಣಿ ಹೆಂಗಸರು ಆಟೋದಲ್ಲಿ ಪ್ರಯಾಣ ಮಾಡಿದರೆ ಅಲ್ಲಿಯೇ ಮಗು ಜನನವಾಗುವಷ್ಟರಮಟ್ಟಿಗೆ ರಸ್ತೆಗಳು ಹಾಳಾಗಿವೆ. ಆ ಮಟ್ಟಿಗೆ ಹಾಳಾಗಿದೆ ಎಂದು ಹೇಳಿದರೆ ಅದಕ್ಕಿಂತಲೂ ಹೆಚ್ಚು ಹಾಳಾಗಬೇಕೆಂದರೆ ಮುಂದೆ ಪ್ರಶ್ನೆಯನ್ನೇ ಕೇಳುವುದಿಲ್ಲ. ನಮ್ಮ ದಾವಣಗೆರೆಯಿಂದ ಜಗಳೂರಿಗೆ ಹೋಗತಕ್ಕಂಥ ರಸ್ತೆ, ಕೊಂಡಜ್ಜಿಗೆ ಹೋಗತಕ್ಕಂಥ ರಸ್ತೆ, ಹಾಗೂ ಚಿನ್ನಗಿರಿಗೆ ಹೋಗತಕ್ಕಂಥ ರಸ್ತೆ ಈ ಮೂರು ರಸ್ತೆಗಳೂ ಕೂಡ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ರಸ್ತೆಗಳಾಗಿರುತ್ತದೆ. ಇವು ಬಹಳ ಹಾಳಾಗಿವೆ. ರಸ್ತೆಗಳಲ್ಲಿ ವಾಹನಗಳು ಓಡಿದರೆ ದೊಡ್ಡ ದೊಡ್ಡ ಲಾರಿಗಳು ಅಪಘಾತಕ್ಕೆ ಈಡಾಗುತ್ತಾ ಇಲ್ಲ. ಆದರೆ ಸಣ್ಣ ಸಣ್ಣ ಆಟೋರಿಕ್ಷಾಗಳು, ಕಾರುಗಳು ಅಪಘಾತಕ್ಕೆ ಈಡಾಗುತ್ತಿದೆ. ಇದರಿಂದ ಬಹಳ ಜನರಿಗೆ ಅನಾನುಕೂಲವಾಗುತ್ತಿದೆ. ಈ ಅಪಘಾತ ಆಗತಕ್ಕಂಥದ್ದನ್ನು ತಪ್ಪಿಸಲು ದಯವಿಟ್ಟು ಮಾನ್ಯ ಸಚಿವರು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಆದೇಶ ಕೊಟ್ಟು ರಿಪೇರಿ ಮಾಡುವುದಕ್ಕೆ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕು ಎನ್ನುವ ಉದ್ದೇಶವೇ ಹೊರತು ಬೇರೆ ಏನೂ ಇಲ್ಲ.

ಶ್ರೀ ಎಚ್. ಡಿ. ದೇವೆಗೌಡ.— ಮಾನ್ಯ ಸದಸ್ಯರು ಹೇಳಿದ್ದನ್ನು ಅರ್ಥಮಾಡಿಕೊಳ್ಳಬಲ್ಲೆ. ಪೊನ್ನೆತಾನೆ ಅವರು ಹೇಳಿರತಕ್ಕಂಥ ಮೂರು ರಸ್ತೆಗಳಲ್ಲಿಯೂ ಕೂಡ ಓಡಾಡಿ ಬಂದಿರುತ್ತೇನೆ. ಈ ನಾಲ್ಕು ರಸ್ತೆಗಳು ಏನು ಇವೆ ಇವು ದಾವಣಗೆರೆಯಲ್ಲಿ ಬಹಳ ಪ್ರಮುಖವಾದ ರಸ್ತೆಗಳಾಗಿವೆ. ಇದರ ಬಗ್ಗೆ ವಾದವಿವಾದ ಬೇಡ. ಈ ರಸ್ತೆಗಳಂ ನಗರದ ವ್ಯಾಪ್ತಿಯಲ್ಲಿ ಬರುವುದರಿಂದ ಎಂಟು ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಬಹುಶ: ಮಾನ್ಯ ಪಂಪಾಪತಿಯವರು ಇಷ್ಟಕ್ಕಾದರೂ ಒಳ್ಳೆಯ ಮಾತನಾಡಬೇಕಾಗಿತ್ತು.

ಶ್ರೀ ಪಂಪಾಪತಿ.—ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ. ಎಂಟು ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ ಎಸ್ಟಿಮೇಟ್ ಮಾಡಿರುತ್ತೇವೆ ಟೆಂಡರನ್ನು ಕರೆಯಬೇಕಾಗಿರುತ್ತದೆ. ಟೆಂಡರನ್ನು ಕರೆದ ನಂತರ ಕೆಲಸ ತೆಗೆದುಕೊಳ್ಳುತ್ತೇವೆ. ನಗರ ಪ್ರದೇಶವನ್ನು ಬಿಟ್ಟು ಹೊರಗೂ ಹೋಗಬೇಕಲ್ಲ. ಆ ಪ್ರದೇಶಗಳನ್ನೂ ಇಂಪ್ರೂವ್ ಮಾಡಲು ಪ್ರಯತ್ನ ಪಡುತ್ತೇವೆ.

ಶ್ರೀ ಕೆ ಬಿ. ಮಹದೇವಪ್ಪ.—ರಸ್ತೆಗಳ ಪಕ್ಕದಲ್ಲಿ ಜಲ್ಲಿ ಕಲೆಕ್ಷನ್ ಮಾಡಿ ಹಾಗೆಯೇ ಬಿದ್ದಿರುತ್ತದೆ, ಮೆಟೀರಿಯಲ್ಸ್‌ನ್ನೆಲ್ಲ ಹಾಗೆಯೇ ಇಟ್ಟಿದ್ದೀರಿ. ಏತಕ್ಕೆಂದರೆ ರೋಡ್ ರೋಲರ್ಸ್ ಇಲ್ಲ ಸ್ಲೀಪರ್ಸ್ ಇಲ್ಲವೆಂದು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಇದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡುತ್ತೀರಾ

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೇಳತಕ್ಕಂಥದ್ದರಲ್ಲಿ ಅರ್ಥ ಇದೆ. ಇದು ಇಡಿ ರಾಜ್ಯಕ್ಕೆ ವ್ಯಾಪ್ತಿಯಾಗಿದೆ. ರೋಡ್ ರೋಲರ್ಸ್ ಇಲ್ಲ, ಸ್ಲೀಪರ್ಸ್ ಇಲ್ಲ ತೊಂದರೆಯಾಗಿರುತ್ತದೆ. ಮತ್ತೆ ಮೆಟೀರಿಯಲ್ಸ್ ರಸ್ತೆ ಪಕ್ಕದಲ್ಲಿ ಇರುವ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡುತ್ತೇನೆ

ಶ್ರೀ ಕೆ ಬಿ. ಮಹೇಶ್ವರಪ್ಪ.— ಎರಡು ರೋಲರ್‌ಗಳು ಇರತಕ್ಕಂಥದ್ದು ಅದು ಕೂಡ ಕೆಟ್ಟಿದೆ ಅದನ್ನು ರಿಪೇರಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಆನಂದರಾವ್.—ಈ ೮ ಲಕ್ಷ ರೂಪಾಯಿಗಳನ್ನ್ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಒದಗಿಸಿದ್ದೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಇದಂ ನಾನು ಈಗ ಹೇಳಿದ ನಾಲ್ಕು ರಸ್ತೆಗಳಿಗೆ ಸಂಬಂಧಪಟ್ಟಂತೆ ಒದಗಿಸಿರುವುದು. ನಿಮ್ಮ ಕ್ಷೇತ್ರಕ್ಕೂ ಹಣ ಒದಗಿಸಿದ್ದೇವೆ. ನೀವು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಪ್ರಶ್ನೆ.—೪೮ (೮೭)

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ತಡೆಹಿಡಿಯುವುದು ಬೇಕೆಂದು ಮತ್ತು ಮುಂದಿನವಾರ ಇದನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು.

ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆ ನಿಗಮಂ

೭೨. ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

ಅ) ಭದ್ರಾವತಿ ಕಬ್ಬಿಣ ಕಾರ್ಖಾನೆ ೧೯೮೨—೮೩ ನೇ ಸಾಲಿನಲ್ಲಿ ಎಷ್ಟು ಲಾಭ ಗಳಿಸಿದೆ;

ಆ) ಅಲ್ಲಿಯ ಕಾರ್ಮಿಕರ ಮತ್ತು ಕಂಟ್ರಾಕ್ಟ್ ಕಾರ್ಮಿಕರ ಸಂಖ್ಯೆ ಎಷ್ಟು,

ಇ) ಈ ಕಂಟ್ರಾಕ್ಟ್ ಕಾರ್ಮಿಕರನ್ನು ಖಾಯಂ ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಎಸ್. ಆರ್ ಬೊಮ್ಮಾಯಿ. (ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು).—

ಅ) ಲಾಭಗಳಿಸಿಲ್ಲ.

ಆ) ಕಾರ್ಖಾನೆಯಲ್ಲಿನ ಕಾರ್ಮಿಕರು.—

	ಸಂಖ್ಯೆ
೧. ಕಾರ್ಮಿಕ ವರ್ಗ	೧೧,೮೮೪
೨. ಅಧಿಕಾರ ವರ್ಗ	೬೬೨
ಒಟ್ಟು	೧೧,೫೪೬

ಇ. ಐ. ಎಸ್. ಎಲ್. ನವರು ಕಂಟ್ರಾಕ್ಟ್ ಕಾರ್ಮಿಕರುಗಳನ್ನು ನೇಮಿಸಿಕೊಂಡಿಲ್ಲ.

೨) ಮೇಲೆ ಹೇಳಿದ 'ಅ' ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದಭವಿಸುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಭದ್ರಾವತಿಯ ಕಬ್ಬಿಣ ಕಾರ್ಖಾನೆಯಲ್ಲಿ ಕಾಂಟ್ರಾಕ್ಟ್ ಕಾರ್ಮಿಕರನ್ನು ನೇಮಕ ಮಾಡಿಕೊಂಡಿಲ್ಲವೆಂದು ಸರ್ಕಾರದ ಅಫಿಪ್ರಾಯವೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾರ್ಖಾನೆಯವರು ಕಾಂಟ್ರಾಕ್ಟ್ ಕಾರ್ಮಿಕರನ್ನು ನೇಮಕ ಮಾಡಿಕೊಂಡಿಲ್ಲ. ಆದರೆ ಅಲ್ಲಿನ ಕೆಲಸಗಳನ್ನು ಯಾರು ಕಾಂಟ್ರಾಕ್ಟ್ ತೆಗೆದುಕೊಂಡಿದ್ದಾರೆ, ಅಂತಹವರು ಮಾತ್ರ ಕಾಂಟ್ರಾಕ್ಟ್ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈ ಕಂಟ್ರಾಕ್ಟ್ ಕಾರ್ಮಿಕರು ಕಾರ್ಖಾನೆಯಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿದ್ದಾರೋ ಅಥವಾ ಲೋಡಿಂಗ್ ಮತ್ತು ಅನ್—ಲೋಡಿಂಗ್ ಕೆಲಸ ಮಾಡಲು ಮಾತ್ರ ನೇಮಕವಾಗಿದ್ದಾರೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಗುತ್ತಿಗೆ ಕೆಲಸವನ್ನು ಪಡೆದವರು ಈ ಕಂಟ್ರಾಕ್ಟ್ ಕಾರ್ಮಿಕರಿಂದ ಗುತ್ತಿಗೆ ಕೆಲಸವನ್ನು ಮಾಡಿಸುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಕಂಟ್ರಾಕ್ಟ್ ಲೇಬರರ್ಸ್ ರೆಗ್ಯುಲೇಷನ್ ಅಂಡ್ ಅಬಾಲಿಷನ್ ಆಕ್ಟ್ ಇದೆ ಎಂಬುದು ತಮಗೆ ಗೊತ್ತಿದೆಯೇ ? ಇದರ ಪ್ರಕಾರ ಖಾಯಂ ಆಗಿ ಕೆಲಸ ಮಾಡುತ್ತಿರುವ ನೌಕರರಿಗೆ ಕೊಡುತ್ತಿರುವ ಸವಲತ್ತುಗಳನ್ನು ಈ ಕಂಟ್ರಾಕ್ಟ್ ಕಾರ್ಮಿಕರಿಗೂ ಕೊಡಬೇಕಾಗುತ್ತದೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಕಾನೂನು ಪ್ರಕಾರ ಈಗಾಗಲೇ ಅಲ್ಲಿನ ಸ್ಥಳೀಯ ಕಾರ್ಮಿಕರ ಸಂಘ ಮತ್ತು ಅಲ್ಲಿನ ಆಡಳಿತ ವರ್ಗದವರ ನಡುವೆ ಎರಡು ಪರ್ಷಗಳಿಂದ ಮಾತುಕತೆ